# كِتَابُ التَّوْحِيد

# ಕಿತಾಬುತ್ತೌಹೀದ್

(ಸೌದಿ ಅರೇಬಿಯಾದ ಹಿರಿಯ ವಿದ್ವಾಂಸರ ವಿವರಣೆಗಳನ್ನು
ಆಧಾರವಾಗಿಟ್ಟುಕೊಂಡು ನಡೆಸಲಾದ ದರ್ಸ್)

ಭಾಗ ೦೫

ಅಬೂ ಹಮ್ಮಾದ್ ಸಲಾಹುದ್ದೀನ್

بِسۡمِ ٱللَّهِ ٱلرَّحۡمَٰنِ ٱلرَّحِيمِ

(ತನ್ನ ಸೃಷ್ಟಿಗಳಿಗೆ) ಅಪಾರ ದಯಾಮಯನೂ, (ತನ್ನ ನೈಜ ವಿಶ್ವಾಸಿಗಳಾದ ದಾಸರಿಗೆ) ಸದಾ ಕರುಣಾಮಯಿಯೂ ಆದ ಅಲ್ಲಾಹುವಿನ ನಾಮದಿಂದ.

ಸರ್ವಸ್ತುತಿಗಳೂ ಸಕಲಲೋಕಗಳ ರಬ್ಬ್‌ಆದ (ಪರಿಪಾಲಕನಾದ) ಅಲ್ಲಾಹುವಿಗೆ ಮೀಸಲು. ಅಂತಿಮ ವಿಜಯವು ಅಲ್ಲಾಹುವಿನ ಭಯಭಕ್ತಿ ಹಾಗೂ ಅವನ ಆಜ್ಞೆ-ನಿಷೇಧಗಳನ್ನು ಪಾಲಿಸುವವರಿಗಾಗಿದೆ. ಅಕ್ರಮಿಗಳ ಹೊರತು (ಇತರರ ವಿರುದ್ಧ) ವೈಷಮ್ಯವಿಲ್ಲ. ಸಜ್ಜನ ದಾಸರ ರಕ್ಷಕನಾದ ಅಲ್ಲಾಹುವಿನ ಹೊರತು ಅನ್ಯ ಆರಾಧ್ಯರಿಲ್ಲ ಎಂದು ನಾನು ಸಾಕ್ಷ್ಯವಹಿಸುತ್ತೇನೆ, ಮತ್ತು ಪ್ರಾಮಾಣಿಕ ಪ್ರವಾದಿಯಾದ ಮುಹಮ್ಮದ್ (صَلَّى ٱللَّٰهُ عَلَيۡهِ وَسَلَّمَ) ರವರು ಅವನ (ಅಲ್ಲಾಹುವಿನ) ದಾಸರೂ ಸಂದೇಶವಾಹಕರೂ ಆಗಿರುವರೆಂದು ನಾನು ಸಾಕ್ಷ್ಯವಹಿಸುತ್ತೇನೆ. ಮುಹಮ್ಮದ್ (صَلَّى ٱللَّٰهُ عَلَيۡهِ وَسَلَّمَ) ರವರ ಮೇಲೂ, ಅವರ ಕುಟುಂಬದವರ ಮೇಲೂ, ಅವರ ಸಹಚರರ (ಸಹಾಬಾಗಳ) ಮೇಲೂ ಹಾಗೂ ಪ್ರತಿಫಲದ ದಿನದ ತನಕ ಅವರನ್ನು ಅತ್ಯುತ್ತಮ ರೀತಿಯಲ್ಲಿ ಅನುಸರಿಸಿದವರ ಮೇಲೂ ಅಲ್ಲಾಹುವಿನ ಸಲಾತ್ ಮತ್ತು ಸಲಾಮ್‌ಗಳು ಇರಲಿ.

ಮುಂದುವರಿದು ಹೇಳುವುದೇನೆಂದರೆ :

ಅಲ್ಲಾಹುವಿನ ದಾಸರೇ, ನಾವೀಗ ಕಲಿಯುತ್ತಿರುವುದು **'ಕಿತಾಬ್ ಅತ್ತೌಹೀದ್'** ಈ ಗ್ರಂಥದ ವಿವರಣೆಯಾಗಿದೆ. ಇದು ಆ ಸರಣಿಯ ಐದನೆಯ ತರಗತಿಯಾಗಿದೆ.

## ಕಿತಾಬ್ ಅತ್ತೌಹೀದ್ ಗ್ರಂಥವನ್ನು ಏಕೆ ರಚಿಸಲಾಯಿತು? ತೌಹೀದ್‌ನ ಅನಿವಾರ್ಯತೆಯೇನು? ಹಾಗೂ ಅದರ ಮಹತ್ವವೇನು?

ಈ ವಿಷಯದ ಕುರಿತು ಅಶ್ಶೈಖ್ ಸಾಲಿಹ್ ಅಲ್‌-ಫೌಝಾನ್ (حَفِظَهُ ٱللَّٰهُ) ರವರು (ಕಿತಾಬ್ ಅತ್ತೌಹೀದ್ ಗ್ರಂಥದ) ವಿವರಣೆಯಲ್ಲಿ ನಮಗೆ ಕಲಿಸಿಕೊಡುತ್ತಾರೆ, ಅವರು ಹೇಳುತ್ತಾರೆ : ತೌಹೀದ್ ಎನ್ನುವುದು ದೀನ್‌ನ ಮೂಲ ಬುನಾದಿಯಾಗಿದೆ. ಅಲ್ಲಾಹುವಿನ ಯಾವುದೇ ಆಜ್ಞೆಗಳಾಗಲೀ ನಿಷೇಧಗಳಾಗಲೀ, ಇಬಾದತ್‌ಗಳಾಗಲೀ ಅಥವಾ ಅಲ್ಲಾಹುವಿನ ಅನುಸರಣೆಯಾಗಲೀ ಅವೆಲ್ಲವೂ ಸ್ಥಾಪಿತಗೊಂಡಿರುವುದು ತೌಹೀದ್ ವಿಶ್ವಾಸದ ಬುನಾದಿಯ ಮೇಲಾಗಿದೆ. ಇಲ್ಲಿ ತೌಹೀದ್ ಅನ್ನುವುದರ ಉದ್ದೇಶವು ಶಹಾದತ್ ಆಗಿದೆ (ಸಾಕ್ಷ್ಯವಚನವಾಗಿದೆ) ಅರ್ಥಾತ್ : ಅಲ್ಲಾಹುವಿನ ಹೊರತು ಆರಾಧನೆಗೆ ನೈಜ ಹಕ್ಕುದಾರರು ಯಾರೂ ಇಲ್ಲ ಹಾಗೂ ಪ್ರವಾದಿ ಮುಹಮ್ಮದ್ (صَلَّى ٱللَّٰهُ عَلَيْهِ وَسَلَّمَ) ರವರು ಅಲ್ಲಾಹುವಿನ ಸಂದೇಶವಾಹಕರಾಗಿರುವರು – ಎಂಬುದಾಗಿದೆ. ಈ ಎರಡು ಸಾಕ್ಷ್ಯವಚನಗಳು (ಶಹಾದತಾನ್‌ಗಳು) ಇಸ್ಲಾಮಿನ ಆಧಾರ ಸ್ತಂಭಗಳ ಪೈಕಿ ಮೊದಲನೆಯ ಆಧಾರ ಸ್ತಂಭವಾಗಿದೆ.

ತೌಹೀದ್ ಇಲ್ಲದೇ, ತನ್ನ ವಿಶ್ವಾಸ ಸರಿಯಿಲ್ಲದೇ ಯಾರೊಬ್ಬರ ಆರಾಧನಾ ಕರ್ಮವೂ ಸ್ವೀಕರಿಸಲ್ಪಡದು, ಯಾರೂ ಸಹ ನರಕಾಗ್ನಿಯಿಂದ ರಕ್ಷೆಹೊಂದಲಾರರು ಹಾಗೂ ಸ್ವರ್ಗ ಪ್ರವೇಶಿಸಲಾರರು. ಏಕೆಂದರೆ ತೌಹೀದ್ ಎಂಬುದು ಆರಾಧನೆಗಿರುವ ಒಂದನೆಯ ಷರತ್ತಾಗಿದೆ. ಈ ಕಾರಣದಿಂದಾಗಿದೆ ಉಲಮಾಗಳು ಈ ವಿಷಯಕ್ಕೆ ಅತೀ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿರುವುದು. ಈ ಕಾರಣಕ್ಕಾಗಿದೆ ಅಲ್ಲಾಹು ಸಂದೇಶವಾಹಕರನ್ನು ಕಳುಹಿಸಿರುವುದು ಹಾಗೂ ಗ್ರಂಥಗಳನ್ನು ಅವತೀರ್ಣಗೊಳಿಸಿರುವುದು. ರಸೂಲ್‌ಗಳ ಪ್ರಥಮ ಕರೆಯು **“ನೀವು ಅಲ್ಲಾಹುವನ್ನು**

**ಮಾತ್ರ ಆರಾಧಿಸಿರಿ ಹಾಗೂ ಅವನೊಂದಿಗೆ ಏನನ್ನೂ ಸಹಭಾಗಿಗಳನ್ನಾಗಿ ಮಾಡದಿರಿ, ಶಿರ್ಕ್ ಮಾಡದಿರಿ"** ಎಂದಾಗಿತ್ತು.

ಮುಆದ್ ಬಿನ್ ಜಬಲ್ (رَضِيَ اللَّهُ عَنْهُ) ರವರನ್ನು ಯಮನ್‌ಗೆ ಕಳುಹಿಸಿದಾಗ ಅವರೊಂದಿಗೆ ಪ್ರವಾದಿ (صَلَّى اللَّهُ عَلَيْهِ وَسَلَّمَ) ರವರು ಹೇಳಿದ ಮಾತನ್ನು ಗಮನಿಸಿರಿ :

« إِنَّكَ تَقْدَمُ عَلَى قَوْمٍ مِنْ أَهْلِ الْكِتَابِ فَلْيَكُنْ أَوَّلَ مَا تَدْعُوهُمْ إِلَى أَنْ يُوَحِّدُوا اللَّهَ تَعَالَى فَإِذَا عَرَفُوا ذَلِكَ فَأَخْبِرْهُمْ أَنَّ اللَّهَ فَرَضَ عَلَيْهِمْ خَمْسَ صَلَوَاتٍ فِي يَوْمِهِمْ وَلَيْلَتِهِمْ، فَإِذَا صَلُّوا فَأَخْبِرْهُمْ أَنَّ اللَّهَ افْتَرَضَ عَلَيْهِمْ زَكَاةً فِي أَمْوَالِهِمْ تُؤْخَذُ مِنْ غَنِيِّهِمْ فَتُرَدُّ عَلَى فَقِيرِهِمْ، فَإِذَا أَقَرُّوا بِذَلِكَ فَخُذْ مِنْهُمْ وَتَوَقَّ كَرَائِمَ أَمْوَالِ النَّاسِ »

**"ನೀನು ಹೋಗುತ್ತಿರುವುದು ಅಹ್ಲುಲ್-ಕಿತಾಬ್‌ನ ಜನತೆಯೆಡೆಗಾಗಿದೆ (ಅರ್ಥಾತ್ ಯಹೂದಿ ಹಾಗೂ ನಸಾರಗಳೆಡೆಗಾಗಿದೆ), ಹಾಗಾಗಿ ನೀನು ಪ್ರಥಮವಾಗಿ ಅವರನ್ನು ಆಹ್ವಾನಿಸಬೇಕಾಗಿರುವುದು ಮಹೋನ್ನತನಾದ ಅಲ್ಲಾಹುವಿನ ಇಬಾದತ್‌ನೆಡೆಗಾಗಿದೆ (ಅಲ್ಲಾಹುವನ್ನು ಏಕಮಾತ್ರವಾಗಿ ಆರಾಧಿಸುವುದರೆಡೆಗಾಗಿದೆ). ಒಂದು ವೇಳೆ ಅವರು ಅಲ್ಲಾಹುವನ್ನು ಅರಿತುಕೊಂಡರೆ (ಅಲ್ಲಾಹುವನ್ನು ಮಾತ್ರ ಆರಾಧಿಸಲು ಒಪ್ಪಿಕೊಂಡರೆ), ಅವರಿಗೆ ತಿಳಿಸು : ಅವರ ಮೇಲೆ ಹಗಲಿರುಳಿನಲ್ಲಿ ಐದು ಹೊತ್ತಿನ ನಮಾಝನ್ನು ಅಲ್ಲಾಹು ಕಡ್ಡಾಯಗೊಳಿಸಿರುವನು. ಅವರೊಂದುವೇಳೆ ನಮಾಝ್ ನಿರ್ವಹಿಸಿದರೆ, ಅವರಿಗೆ ತಿಳಿಸು : ಅವರ ಸಂಪತ್ತಿನ ಮೇಲೆ ಅಲ್ಲಾಹು ಝಕಾತನ್ನು ಕಡ್ಡಾಯಗೊಳಿಸಿರುವನು, ಅದು ಅವರ ಪೈಕಿ ಶ್ರೀಮಂತರಿಂದ ತೆಗೆದುಕೊಂಡು ಬಡವರಿಗೆ ನೀಡಬೇಕಾಗುವುದು. ಒಂದು ವೇಳೆ ಅದನ್ನವರು ಅನುಸರಿಸಿದರೆ ಅವರಿಂದ ಝಕಾತನ್ನು**

**ತೆಗೆದುಕೋ, ಆದರೆ ಜನರ ಅಮೂಲ್ಯ ಸಂಪತ್ತಿನಿಂದ (ಝಕಾತ್ ಪಡೆಯುವುದರಿಂದ) ದೂರವಿರು."** [1]

ಅವರ ಪ್ರಥಮ ಕರೆಯು ತೌಹೀದ್‌ನ ವಿಶ್ವಾಸವಾಗಿತ್ತು, ತದನಂತರ ಅವರ ಕರೆಯು ಆರಾಧನೆಗಳ ಪೈಕಿ ಅತ್ಯಂತ ಶ್ರೇಷ್ಠ ಆರಾಧನೆಯಾದ ನಮಾಝ್ ನಿರ್ವಹಿಸಲು ಆಗಿತ್ತು. ಆ ಬಳಿಕ ಇತರೆಲ್ಲಾ ವಿಷಯಗಳೆಡೆಗೆ ಜನರನ್ನು ಅವರು ಆಹ್ವಾನಿಸಿದರು, ಇದಾಗಿತ್ತು ಅವರ ದಅ್‌ವತ್‌ನ ರೀತಿ. ಅಲ್ಲಾಹುವಿನೆಡೆಗೆ ಆಹ್ವಾನಿಸುವ ಪ್ರತಿಯೋರ್ವ ದಾಈಯ (ಸಂದೇಶಪ್ರಚಾರಕನ) ಶೈಲಿಯು ಇದಾಗಿರಬೇಕು, ಪ್ರಮುಖ ವಿಷಯಕ್ಕೆ ಅವನು ಪ್ರಾಧಾನ್ಯತೆ ನೀಡಿ ಅವನು ದಅ್‌ವಾ ನಿರ್ವಹಿಸಬೇಕಾಗಿದೆ.

ಪ್ರತಿಯೋರ್ವನೂ ಪ್ರಥಮ ಆದ್ಯತೆ ನೀಡಬೇಕಾಗಿರುವುದು ತೌಹೀದ್‌ನ ವಿಶ್ವಾಸಕ್ಕಾಗಿದೆ. ಮೇಲೆ ಉಲ್ಲೇಖಿಸಲಾದ ಹದೀಸ್ ಅದಕ್ಕಿರುವ ಪುರಾವೆಯಾಗಿದೆ. ಆದರೆ ಇಂದು ಅನೇಕರು ತೌಹೀದ್‌ನ ವಿಶ್ವಾಸವನ್ನು ಜನರಿಗೆ ಕಲಿಸಿಕೊಡದೇ ಕೇವಲ ಐದು ಹೊತ್ತಿನ ನಮಾಝ್‌ಗೆ ಕರೆದೊಯ್ಯುತ್ತಿದ್ದಾರೆ, ಝಕಾತ್‌ನ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ, ಸಮುದಾಯದಲ್ಲಿ (ತೌಹೀದ್‌ನ ಹೊರತು ಇತರ) ಯಾವುದಾದರೂ ಕೆಡುಕಿದ್ದರೆ ಅದರ ನಿವಾರಣೆಗೆ ಪ್ರಾಧಾನ್ಯತೆ ನೀಡುತ್ತಿದ್ದಾರೆ (ಕೆಡುಕನ್ನು ತಡೆಗಟ್ಟಬಾರದು ಎಂದಲ್ಲ ಆದರೆ ತೌಹೀದ್‌ನ ಬದಲು ಇವುಗಳಿಗೆ ಪ್ರಾಧಾನ್ಯತೆಯನ್ನು ನೀಡಲಾಗುತ್ತಿದೆ ಎಂದಾಗಿದೆ). ಆದರೆ ಪ್ರವಾದಿ ಹಾಗೂ ಸಹಾಬಿಗಳ, ಅಹ್ಲುಸ್ಸುನ್ನಃ ವಲ್-ಜಮಾಅತ್‌ನ ದಅ್‌ವತ್‌ನ ಶೈಲಿಯು ಪ್ರಪ್ರಥವಾಗಿ ತೌಹೀದ್‌ನ ವಿಶ್ವಾಸವನ್ನು ಕಲಿಸಿಕೊಡುವುದಾಗಿದೆ. ಸಹಾಬಿಗಳು ಕುರ್‌ಆನ್ ಕಲಿಯುವುದಕ್ಕಿಂತಲೂ ಮುಂಚಿತವಾಗಿ ತೌಹೀದ್‌ನ ವಿಶ್ವಾಸವನ್ನು ಕಲಿಯುತ್ತಿದ್ದರು.

1. ಸಹೀಹ್ ಮುಸ್ಲಿಮ್ : 19

ಜುಂದುಬ್ ಬಿನ್ ಅಬ್ದಿಲ್ಲಾಹ್ (رَضِيَ اللَّهُ عَنْهُ) ರವರು ಹೇಳಿದರು :

« كُنَّا مَعَ النَّبِيِّ صَلَّى اللَّهُ عَلَيْهِ وَسَلَّمَ وَنَحْنُ فِتْيَانٌ حَزَاوِرَةٌ فَتَعَلَّمْنَا الْإِيمَانَ قَبْلَ أَنْ نَتَعَلَّمَ الْقُرْآنَ ثُمَّ تَعَلَّمْنَا الْقُرْآنَ فَازْدَدْنَا بِهِ إِيمَانًا »

**“ನಾವು ಪ್ರವಾದಿ (صَلَّى اللَّهُ عَلَيْهِ وَسَلَّمَ) ರವರೊಂದಿಗಿದ್ದೆವು, ಆಗ ನಾವು ಗಟ್ಟಿಮುಟ್ಟಾದ ಎಳೆಯ ಬಾಲಕರಾಗಿದ್ದೆವು. ನಾವು ಕುರ್‌ಆನ್ ಕಲಿಯುವುದಕ್ಕಿಂತಲೂ ಮುಂಚಿತವಾಗಿ ಈಮಾನ್‌ಅನ್ನು (ವಿಶ್ವಾಸವನ್ನು) ಕಲಿತಿದ್ದೆವು, ನಂತರ ನಾವು ಕುರ್‌ಆನನ್ನು ಕಲಿತೆವು ಹೀಗೆ ಅದು (ಕುರ್‌ಆನ್) ನಮ್ಮ ಈಮಾನ್‌ಅನ್ನು ಅಧಿಕಗೊಳಿಸಿತು.”** [2]

ಇನ್ನು ರಸೂಲ್ (صَلَّى اللَّهُ عَلَيْهِ وَسَلَّمَ) ರವರ ದಅ್‌ವತ್‌ನ ಶೈಲಿಯನ್ನು ನಾವು ನೋಡುವುದಾದರೆ –ಅವರು ಮಕ್ಕಾದಲ್ಲಿದ್ದಾಗ ಅಲ್ಲಿನ ಪ್ರತಿಯೋರ್ವ ವ್ಯಕ್ತಿಯನ್ನೂ, ಪ್ರತಿಯೊಂದು ಗೋತ್ರವನ್ನೂ ಅಲ್ಲಾಹುವಿನ ಆರಾಧನೆಯೆಡೆಗೆ ಅರ್ಥಾತ್ ತೌಹೀದ್‌ನೆಡೆಗೆ ಆಹ್ವಾನಿಸುತ್ತಿದ್ದರು. ಈ ಸಂದೇಶವನ್ನು ಸ್ವೀಕರಿಸಿದ ಕಾರಣದಿಂದಾಗಿ ಅನೇಕರು (ಸತ್ಯನಿಷೇಧಿಗಳಿಂದ) ಸಂಕಷ್ಟಗಳನ್ನು ಎದುರಿಸಬೇಕಾಯಿತು. ಹಲವು ಸಹಾಬಿಗಳು ಮರಣವನ್ನಪ್ಪಿದರು. ಹಲವರು ತೀವ್ರ ಶಿಕ್ಷೆಗಳಿಗೆ ಗುರಿಯಾದರು. ಮಹಾನ್ ಸಹಾಬಿಗಳಾದ ಸುಮಯ್ಯಃ (رَضِيَ اللَّهُ عَنْهَا), ಅಮ್ಮಾರ್ ಬಿನ್ ಯಾಸಿರ್ (رَضِيَ اللَّهُ عَنْهُ), ಬಿಲಾಲ್ (رَضِيَ اللَّهُ عَنْهُ) ಮುಂತಾದವರು ಕಠಿಣ ಸಂಕಷ್ಟಗಳನ್ನು ಅನುಭವಿಸಿರುವುದು ಇದೇ ತೌಹೀದ್‌ನ ವಿಷಯದಲ್ಲಾಗಿತ್ತು. ನಂತರ ರಸೂಲ್ (صَلَّى اللَّهُ عَلَيْهِ وَسَلَّمَ) ರವರು ಮಕ್ಕಾದಿಂದ ಮದೀನಕ್ಕೆ ವಲಸೆಹೋದಾಗ ಅಲ್ಲಿಯೂ ಅವರು ಜನರನ್ನು ಆಹ್ವಾನಿಸಿದ್ದು ತೌಹೀದ್‌ನೆಡೆಗಾಗಿತ್ತು.

2. ಸುನನ್ ಇಬ್ನ್ ಮಾಜಃ : 61

## ತಮ್ಮ ಸುತ್ತಮುತ್ತಲಿನ ರಾಜರುಗಳಿಗೆ ಪ್ರವಾದಿ (ﷺ) ರವರ ಪತ್ರ ಹಾಗೂ ರೋಮ್‌ನ ಚಕ್ರವರ್ತಿಯ ಪ್ರತಿಕ್ರಿಯೆ...

ಪ್ರವಾದಿ (ﷺ) ರವರು ತಮ್ಮ ಸುತ್ತಮುತ್ತಲಿನ ನಾಡಿನ ಆಡಳಿತಗಾರರನ್ನು ತೌಹೀದ್‌ನೆಡೆಗೆ ಆಹ್ವಾನಿಸುತ್ತಾ ಅವರಿಗೆ ಪತ್ರಗಳನ್ನು ಬರೆಯುತ್ತಿದ್ದರು.

ಅನಸ್ (رَضِيَ اللَّهُ عَنْهُ) ರವರಿಂದ ವರದಿ :

« أَنَّ نَبِيَّ اللهِ صَلَّى اللهُ عَلَيْهِ وَسَلَّمَ كَتَبَ إِلَى كِسْرَى، وَإِلَى قَيْصَرَ، وَإِلَى النَّجَاشِيِّ، وَإِلَى كُلِّ جَبَّارٍ يَدْعُوهُمْ إِلَى اللهِ تَعَالَى »

**"ಅಲ್ಲಾಹುವಿನ ಪ್ರವಾದಿ (ﷺ) ರವರು (ಪರ್ಷಿಯಾದ ರಾಜರಾದ) ಕಿಸ್ರಾರಿಗೆ, (ರೋಮ್ ಚಕ್ರವರ್ತಿಯಾದ) ಕೈಸರ್‌ರಿಗೆ, (ಅಬಿಸ್ಸಿನಿಯಾದ ರಾಜರಾದ) ಅನ್ನಜಾಶಿಯ್ಯ್‌ಗೆ ಹಾಗೂ ಎಲ್ಲಾ (ಇನ್ನಿತರ) ಸರ್ವಾಧಿಕಾರಿಗಳಿಗೆ –ಅವರನ್ನು ಮಹೋನ್ನತನಾದ ಅಲ್ಲಾಹುವಿನೆಡೆಗೆ ಆಹ್ವಾನಿಸುತ್ತಾ– ಪತ್ರಗಳನ್ನು ಬರೆದಿರುವರು."** [3]

ಅದೇ ರೀತಿ ರೋಮಿನ ರಾಜರಾಗಿದ್ದ ಹಿರ್‌ಕಲ್‌ರಿಗೆ ಪ್ರವಾದಿ (ﷺ) ರವರು ಇದೇ ರೀತಿ ಪತ್ರವನ್ನು ಬರೆದಿದ್ದರು, ಆ ಪತ್ರವು ರಾಜ ಹಿರ್‌ಕಲ್‌ರಿಗೆ ತಲುಪಿದಾಗ ಅವರು ಮಕ್ಕಾದಲ್ಲಿ ಪ್ರವಾದಿ (ﷺ) ರವರಿಗೆ (ಕುಟುಂಬ ಅಥವಾ ಗೋತ್ರದಲ್ಲಿ) ಸಂಬಂಧವಿರುವ ಯಾವುದಾದರೊಂದು ವ್ಯಕ್ತಿಯನ್ನು

3. ಸಹೀಹ್ ಮುಸ್ಲಿಮ್ : 1774

ಹುಡುಕಲಾರಂಭಿಸಿದರು, ಆಗ ಅವರಿಗೆ ಅಬೂ ಸುಫ್ಯಾನ್ (رَضِيَ اللَّهُ عَنْهُ) ರವರು ಶಾಮ್‌ನಲ್ಲಿ ಸಿಕ್ಕಿದರು. ಅದು ಅಬೂ ಸುಫ್ಯಾನ್ (رَضِيَ اللَّهُ عَنْهُ) ರವರು ಇಸ್ಲಾಮ್ ಸ್ವೀಕರುಸುವುದಕ್ಕಿಂದಲೂ ಮುಂಚಿನ ಸಂದರ್ಭವಾಗಿತ್ತು. ರಾಜ ಹಿರ್‌ಕಲ್‌ರವರು ಅಬೂ ಸುಫ್ಯಾನ್ (صَلَّى اللَّهُ عَلَيْهِ وَسَلَّمَ) ರವರನ್ನು ಕರೆದು ಪ್ರವಾದಿ ಮುಹಮ್ಮದ್ (صَلَّى اللَّهُ عَلَيْهِ وَسَلَّمَ) ರವರ ಕುರಿತು ಕೆಲವು ವಿಚಾರಗಳನ್ನು ಕೇಳಿದರು. ಅವರು ಕೇಳಿದರು :

« مَاذَا يَأْمُرُكُمْ؟ »

**"ಅವರು (ಪ್ರವಾದಿ ಮುಹಮ್ಮದ್ صَلَّى اللَّهُ عَلَيْهِ وَسَلَّمَ ನಿಮಗೆ ಏನನ್ನು ಆಜ್ಞಾಪಿಸುತ್ತಾರೆ (ಅವರ ಬೋಧನೆಗಳೇನು)?"** ಆಗ ಅಬೂ ಸುಫ್ಯಾನ್ (رَضِيَ اللَّهُ عَنْهُ) ಹೇಳಿದರು :

« يَقُولُ: اعْبُدُوا اللَّهَ وَحْدَهُ وَلاَ تُشْرِكُوا بِهِ شَيْئًا، وَاتْرُكُوا مَا يَقُولُ آبَاؤُكُمْ، وَيَأْمُرُنَا بِالصَّلاَةِ وَالزَّكَاةِ وَالصِّدْقِ وَالعَفَافِ وَالصِّلَةِ »

**"ಅವರು ನಮಗೆ ಆಜ್ಞಾಪಿಸುತ್ತಿರುವುದು : ನೀವು ಅಲ್ಲಾಹುವನ್ನು ಮಾತ್ರ ಆರಾಧಿಸಿರಿ, ಅವನೊಂದಿಗೆ ಏನನ್ನೂ ಸಹಭಾಗಿಗಳಾಗಿ ಮಾಡದಿರಿ (ಅರ್ಥಾತ್ ಶಿರ್ಕ್ ಮಾಡದಿರಿ). ನಿಮ್ಮ ಪೂರ್ವಜರು (ಯಾವುದೇ ಆಧಾರಗಳಿಲ್ಲದೆ) ಏನಲ್ಲಾ (ಕಟ್ಟುಕಥೆಗಳನ್ನು) ಹೇಳುತ್ತಿದ್ದರೋ ಅದನ್ನು ಉಪೇಕ್ಷಿಸಿರಿ ಹಾಗೂ ನಮಾಝ್ ನಿರ್ವಹಿಸಿರಿ, ಸತ್ಯವನ್ನು ನುಡಿಯಿರಿ, ಚಾರಿತ್ರ್ಯವನ್ನು ಸಂರಕ್ಷಿಸಿರಿ, ಕುಟುಂಬ ಸಂಬಂಧವನ್ನು ಸ್ಥಿರಗೊಳಿಸಿರಿ – ಎಂದಾಗಿದೆ".** ಇದನ್ನು ಆಲಿಸಿದಾಗ ರಾಜ ಹಿರ್‌ಕಲ್ ಹೇಳಿದರು :

« فَإِنْ كَانَ مَا تَقُولُ حَقًّا فَسَيَمْلِكُ مَوْضِعَ قَدَمَيَّ هَاتَيْنِ، وَقَدْ كُنْتُ أَعْلَمُ أَنَّهُ خَارِجٌ، لَمْ أَكُنْ أَظُنُّ أَنَّهُ مِنْكُمْ، فَلَوْ أَنِّي أَعْلَمُ أَنِّي أَخْلُصُ إِلَيْهِ لَتَجَشَّمْتُ لِقَاءَهُ، وَلَوْ كُنْتُ عِنْدَهُ لَغَسَلْتُ عَنْ قَدَمِهِ »

**"(ಪ್ರವಾದಿ ಮುಹಮ್ಮದ್ ﷺ ರವರ ಬಗ್ಗೆ) ನೀನು ಹೇಳುತ್ತಿರುವುದು ಒಂದುವೇಳೆ ಸತ್ಯವೆಂದಾದರೆ, ನನ್ನ ಪಾದದ ಕೆಳಗಿರುವ ಈ ರಾಜ್ಯವನ್ನು ಅವರು ಸ್ವಾಧೀನಪಡಿಸಿಕೊಳ್ಳುವರು. ಅವರು ಬರುವರೆಂದು ನನಗೆ (ಗ್ರಂಥಗಳಿಂದ) ಈ ಮೊದಲೇ ತಿಳಿದಿತ್ತು, ಆದರೆ ಅವರು ನಿಮ್ಮಿಂದ (ಅರಬ್ ಸಂತತಿಯಿಂದ) ಬರುತ್ತಾರೆ ಎಂದು ನನಗೆ ತಿಳಿದಿರಲಿಲ್ಲ. ಒಂದುವೇಳೆ ಅವರೆಡೆಗೆ ತಲುಪಲು ನನಗೆ ಸಾಧ್ಯವಾಗುವುದೆಂದು ನನಗೆ ತಿಳಿದಿದ್ದರೆ ಖಂಡಿತವಾಗಿಯೂ ನಾನು ಅವರನ್ನು ಭೇಟಿಯಾಗಲು ಪ್ರಯತ್ನ ಪಡುತ್ತಿದ್ದೆನು, ಒಂದುವೇಳೆ ನಾನು ಅವರ ಬಳಿಯಿರುತ್ತಿದ್ದರೆ ಅವರ ಪಾದದಿಂದ (ಹರಿದ ನೀರಿನಲ್ಲಿ) ನಾನು (ನನ್ನ ಮುಖವನ್ನು) ತೊಳೆದುಕೊಳ್ಳುತ್ತಿದ್ದೆನು."**[4]

## ತೌಹೀದ್‌ನ ಮೇಲೆ ನೆಲೆನಿಲ್ಲುವವರಿಗೆ ಅಲ್ಲಾಹುವಿನ ವಾಗ್ದಾನ...

ನೀವು ತೌಹೀದ್‌ನ ಮೇಲೆ ನೆಲೆನಿಲ್ಲುವುದಾದರೆ ಅಲ್ಲಾಹು ನಿಮಗೆ ಸ್ಥಿರತೆಯನ್ನು ದಯಪಾಲಿಸುವನು. ಇದು ಅಲ್ಲಾಹು ತೌಹೀದ್‌ಗೆ ನೀಡಿದ ಘನತೆಯಾಗಿದೆ ಹಾಗೂ ಅಲ್ಲಾಹುವಿನ ವಾಗ್ದಾನವಾಗಿದೆ. ಅವನು (سُبْحَانَهُ وَتَعَالَى) ಹೇಳಿದನು :

4. ಸಹೀಹ್ ಅಲ್-ಬುಖಾರಿ : 7

﴿وَعَدَ ٱللَّهُ ٱلَّذِينَ ءَامَنُوا۟ مِنكُمْ وَعَمِلُوا۟ ٱلصَّٰلِحَٰتِ لَيَسْتَخْلِفَنَّهُمْ فِى ٱلْأَرْضِ كَمَا ٱسْتَخْلَفَ ٱلَّذِينَ مِن قَبْلِهِمْ وَلَيُمَكِّنَنَّ لَهُمْ دِينَهُمُ ٱلَّذِى ٱرْتَضَىٰ لَهُمْ وَلَيُبَدِّلَنَّهُم مِّنۢ بَعْدِ خَوْفِهِمْ أَمْنًا ۚ يَعْبُدُونَنِى لَا يُشْرِكُونَ بِى شَيْـًٔا ۚ وَمَن كَفَرَ بَعْدَ ذَٰلِكَ فَأُو۟لَٰٓئِكَ هُمُ ٱلْفَٰسِقُونَ ۝٥٥﴾

**“ನಿಮ್ಮ ಪೈಕಿ ಯಾರು ವಿಶ್ವಾಸವಿಡುವರೋ, ಮತ್ತು ಸತ್ಕರ್ಮಗಳನ್ನು ನಿರ್ವಹಿಸುವರೋ ಅವರಿಗೆ ಅಲ್ಲಾಹು ವಾಗ್ದಾನ ಮಾಡಿರುವನು (ಅದೇನೆಂದರೆ), ಖಂಡಿತವಾಗಿಯೂ ಅವರಿಗಿಂತಲೂ ಮುಂಚಿನವರಿಗೆ (ಅಧಿಕಾರ) ನೀಡಿದಂತೆ ಅವರಿಗೂ ಭೂಮಿಯ ಮೇಲೆ ಉತ್ತರಾಧಿಕಾರವನ್ನು ಅವನು ನೀಡುವನು, ಮತ್ತು ಅವನು ಅವರಿಗಾಗಿ ನಿರ್ಣಯಿಸಿದ ತಮ್ಮ ದೀನ್‌ಅನ್ನು (ಅರ್ಥಾತ್ ಇಸ್ಲಾಮ್‌ಅನ್ನು) (ಅವರು ಅನುಷ್ಠಾನಗೊಳಿಸಲು) ಅವರಿಗೆ ಅಧಿಕಾರವನ್ನು ನೀಡುವನು. ಮತ್ತು ಅವರ (ಪ್ರಸಕ್ತ) ಭಯದ ಸ್ಥಿತಿಯನ್ನು ಶಾಂತಿ ಹಾಗೂ ಸುರಕ್ಷತೆಯ ಸ್ಥಿತಿಗೆ ಅವನು ಖಂಡಿತವಾಗಿಯೂ ಬದಲಾಯಿಸುವನು. (ಅದೇಕೆಂದರೆ) ಅವರು (ನೈಜ ವಿಶ್ವಾಸಿಗಳು) ನನ್ನನ್ನು ಮಾತ್ರವೇ ಆರಾಧಿಸುವರು ಮತ್ತು (ನನ್ನ ಆರಾಧನೆಯಲ್ಲಿ) ಏನನ್ನೂ ಸಹಭಾಗಿಯಾಗಿ ಮಾಡಲಾರರು. ಆದರೆ ಇದಾದನಂತರವೂ ಯಾರು ಕೃತಘ್ನತೆಯನ್ನು ತೋರುವರೋ, ಅವರಾಗಿರುವರು ಫಾಸಿಕೂನ್ (ಅಲ್ಲಾಹುಗೆ ಅವಿಧೇಯರಾದ ಧಿಕ್ಕಾರಿಗಳು).”** [5]

ನೀವು ತೌಹೀದ್‌ನ ಮೇಲೆ ನೆಲೆನಿಲ್ಲುವುದಾದರೆ ಅಲ್ಲಾಹು ನಿಮಗೆ ಅಧಿಕಾರ ಮತ್ತು ಪ್ರಾತಿನಿಧ್ಯವನ್ನು ನೀಡುವನು. ತೌಹೀದ್‌ನ ಅಚಲವಿಶ್ವಾಸದಿಂದ ಕೂಡಿದ್ದ ಮಧ್ಯಪ್ರಾಚ್ಯದ ಮರುಭೂಮಿಯಲ್ಲಿದ್ದ ಈ ಉಮ್ಮತ್ತ್‌ನ ಪ್ರಥಮ ತಲೆಮಾರಿನವರು ಭೂಮಿಯ ಪೂರ್ವ ಮತ್ತು ಪಶ್ಚಿಮದವರೆಗೆ ತಲುಪಿರುವುದು ಇದೇ ತೌಹೀದ್‌ನ ಸಂದೇಶದ ಫಲವಾಗಿತ್ತು. ಈ ಮೂಲಕ ಇಸ್ಲಾಮಿನ ಸಂದೇಶವು ಯುರೋಪ್,

5. ಕುರ್‌ಆನ್ 24 : 55

ಚೈನಾ, ಮೊರಾಕೊ, ಸ್ಪೇನ್ ಹೀಗೆ ಉತ್ತರದಿಂದ ದಕ್ಷಿಣದವರೆಗೂ ಪೂರ್ವದಿಂದ ಪಶ್ಚಿಮದವರೆಗೂ ಹಬ್ಬಿತು. ಇದು ಅಲ್ಲಾಹುವಿನ ಮಹಾ ಅನುಗ್ರಹವಾಗಿತ್ತು. ಆದರೆ ಯಾವಾಗ ಅವರು ತಮ್ಮ ದೀನ್‌ಅನ್ನು (ತೌಹೀದ್‌ಅನ್ನು) ಕಡೆಗಣಿಸಿದರೋ ಆಗ ಅಲ್ಲಾಹುವಿನ ಸಹಾಯವನ್ನು ಅವರು ಕಳೆದುಕೊಂಡರು!.

## ತೌಹೀದ್ ಈಮಾನ್‌ನ ವಿಶ್ವಾಸದ ಮೂಲಬುನಾದಿಯಾಗಿದೆ

ಶೈಖುಲ್ ಇಸ್ಲಾಮ್ ಇಬ್ನ್ ತಯ್ಮಿಯ್ಯಃ (رَحِمَهُ ٱللَّهُ) ಹೇಳಿದರು :

« شَهَادَةُ التَّوْحِيدِ تَفْتَحُ بَابَ الْخَيْرِ وَالِاسْتِغْفَارُ مِنْ الذُّنُوبِ يُغْلِقُ بَابَ الشَّرِّ »

**“ತೌಹೀದ್‌ನ (ಅರ್ಥಾತ್ ಅಲ್ಲಾಹುವಿನ ಹೊರತು ಆರಾಧನೆಗೆ ಹಕ್ಕುದಾರನು ಯಾರೂ ಇಲ್ಲ ಎಂಬ) ಸಾಕ್ಷ್ಯವಚನವು ಒಳಿತಿನ ಬಾಗಿಲನ್ನು ತೆರೆದಿಡುತ್ತದೆ ಮತ್ತು ಇಸ್ತಿಗ್‌ಫಾರ್ (ಅಲ್ಲಾಹುವಿನೊಂದಿಗೆ ಪಾಪ ಮುಕ್ತಿ ಬೇಡುವಿಕೆಯು) ಕೆಡುಕಿನ ಬಾಗಿಲನ್ನು ಮುಚ್ಚುತ್ತದೆ.”** [6]

ಮತ್ತು ಅವರು (رَحِمَهُ ٱللَّهُ) ಹೇಳಿದರು :

« إِنَّ التَّوْحِيدَ أَصْلُ الْإِيمَانِ وَهُوَ الْكَلَامُ الْفَارِقُ بَيْنَ أَهْلِ الْجَنَّةِ وَأَهْلِ النَّارِ وَهُوَ ثَمَنُ الْجَنَّةِ وَلَا يَصِحُّ إِسْلَامُ أَحَدٍ إِلَّا بِهِ وَمَنْ كَانَ آخِرُ كَلَامِهِ لَا إِلَهَ إِلَّا اللَّهُ دَخَلَ الْجَنَّةَ »

6. ಮಜ್‌ಮೂಅ್ ಅಲ್-ಫತಾವಾ 10/256

**"ಖಂಡಿತವಾಗಿಯೂ ತೌಹೀದ್ ಈಮಾನ್‌ನ (ವಿಶ್ವಾಸದ) ಮೂಲಬುನಾದಿಯಾಗಿದೆ, ಅದು ಸ್ವರ್ಗದ ಜನರ ಮತ್ತು ನರಕದ ಜನರ ನಡುವೆ ಬೇರ್ಪಡಿಸುವ ವಚನವಾಗಿದೆ. ಅದು ಸ್ವರ್ಗದ ಮೌಲ್ಯವಾಗಿದೆ. ಅದು (ಅರ್ಥಾತ್ ತೌಹೀದ್) ಇಲ್ಲದೆ ಯಾರೊಬ್ಬರ ಇಸ್ಲಾಮ್ ಕೂಡ ಸರಿಯಾಗದು. (ಮರಣ ಹೊಂದುವಾಗ) ಯಾರ ಅಂತಿಮ ವಚನವು 'ಲಾ ಇಲಾಹ ಇಲ್ಲಲ್ಲಾಹ್' (ಅರ್ಥಾತ್ ಅಲ್ಲಾಹುವಿನ ಹೊರತು ಆರಾಧನೆಗೆ ನೈಜ ಹಕ್ಕುದಾರನು ಯಾರೂ ಇಲ್ಲ) ಎಂದಾಗಿರುವುದೋ ಅವನು ಸ್ವರ್ಗವನ್ನು ಪ್ರವೇಶಿಸುವನು."** [7]

## ಪ್ರವಾದಿಗಳ ಆದಿ ಮತ್ತು ಅಂತ್ಯದ ಕರೆ : ತೌಹೀದ್

ಅಲ್ಲಾಹುವಿನ ದಾಸರೇ!, ಪ್ರವಾದಿಗಳ ಪ್ರಥಮ ಕರೆಯು ತೌಹೀದ್ ಆಗಿತ್ತು. ಅಲ್ಲಾಹು (سُبْحَانَهُ وَتَعَالَىٰ) ಹೇಳುತ್ತಾನೆ :

﴿وَمَآ أَرۡسَلۡنَا مِن قَبۡلِكَ مِن رَّسُولٍ إِلَّا نُوحِيٓ إِلَيۡهِ أَنَّهُۥ لَآ إِلَٰهَ إِلَّآ أَنَا۠ فَٱعۡبُدُونِ ٢٥﴾

**"ನನ್ನ ಹೊರತು ಆರಾಧನೆಗೆ ಅರ್ಹರು ಯಾರೂ ಇಲ್ಲ. ಆದ್ದರಿಂದ ನನ್ನನು (ಮಾತ್ರ) ಆರಾಧಿಸಿರಿ" ಎಂಬ ಸಂದೇಶ ನೀಡಲ್ಪಡದೆ ತಮಗಿಂತ ಮುಂಚಿತವಾಗಿ ಯಾವುದೇ ರಸೂಲರನ್ನೂ ನಾವು ನಿಯೋಗಿಸಿಲ್ಲ."** [8]

7. ಮಜ್‌ಮೂಅ್ ಅಲ್–ಫತಾವಾ 24/235
8. ಕುರ್‌ಆನ್ 21 : 25

ತೌಹೀದ್ ಪ್ರವಾದಿಗಳ ವಸಿಯ್ಯಃತ್ (ಉಯಿಲು) ಆಗಿದೆ. ಅರ್ಥಾತ್ ಅವರು ಮರಣಹೊಂದುವ ಮೊದಲು ತಮ್ಮ ಜನರು ಹಾಗೂ ಮಕ್ಕಳೊಂದಿಗೆ ಅವರು ಹೇಳಿರುವುದು ತೌಹೀದ್ ಆಗಿದೆ. ಇದನ್ನು ನಾವು ಸುಸ್ಪಷ್ಟವಾಗಿ ಕುರ್‌ಆನ್‌ನಲ್ಲಿ ಕಾಣಬಹುದಾಗಿದೆ :

﴿أَمْ كُنتُمْ شُهَدَآءَ إِذْ حَضَرَ يَعْقُوبَ ٱلْمَوْتُ إِذْ قَالَ لِبَنِيهِ مَا تَعْبُدُونَ مِنۢ بَعْدِى ۖ قَالُوا۟ نَعْبُدُ إِلَٰهَكَ وَإِلَٰهَ ءَابَآئِكَ إِبْرَٰهِـۧمَ وَإِسْمَٰعِيلَ وَإِسْحَٰقَ إِلَٰهًا وَٰحِدًا وَنَحْنُ لَهُۥ مُسْلِمُونَ ﴿١٣٣﴾﴾

**“(ಯಹೂದಿಗಳು ತಾವು ಇಬ್ರಾಹೀಮ್ ಮತ್ತು ಯಅ್‌ಕೂಬ್‌ರವರ ದೀನ್‌ಅನ್ನು ಅನುಸರಿಸುತ್ತಿರುವೆವು ಎಂದಾಗ ಅವರ ವಾದವನ್ನು ಖಂಡಿಸುತ್ತಾ ಅಲ್ಲಾಹು ಹೇಳಿದನು) ಯಅ್‌ಕೂಬ್‌ರವರಿಗೆ ಮರಣವು ಸನ್ನಿಹಿತವಾದಾಗ ನೀವು ಸಾಕ್ಷಿಗಳಾಗಿದ್ದೀರಾ? ಅವರು ತಮ್ಮ ಪುತ್ರರೊಂದಿಗೆ ಹೇಳಿದ ಸಂದರ್ಭ : “ನನ್ನ (ಮರಣದ) ನಂತರ ನೀವು ಏನನ್ನು ಆರಾಧಿಸುವಿರಿ?” ಅವರು (ಪುತ್ರರು) ಹೇಳಿದರು : “ನಿಮ್ಮ ಇಲಾಹ್‌ಅನ್ನು (ಆರಾಧನೆಗೆ ಹಕ್ಕುದಾರನಾದ ಅಲ್ಲಾಹುವನ್ನು) ಮತ್ತು ನಿಮ್ಮ ತಂದೆಯರಾದ ಇಬ್ರಾಹೀಮ್, ಇಸ್ಮಾಈಲ್, ಇಸ್‌ಹಾಕ್‌ರವರ ಇಲಾಹ್‌ಆದ (ಆರಾಧ್ಯನಾದ) ಏಕೈಕ ಇಲಾಹ್‌ಅನ್ನು (ಅಲ್ಲಾಹುವನ್ನು ಮಾತ್ರವೇ) ನಾವು ಆರಾಧಿಸುವೆವು. ನಾವು ಅವನಿಗೆ ವಿಧೇಯರಾಗಿರುವೆವು (ಅರ್ಥಾತ್ ಮುಸ್ಲಿಮರಾಗಿರುವೆವು).”** [9]

ಇದಾಗಿತ್ತು ಪ್ರವಾದಿಗಳ ವಸಿಯ್ಯಃತ್. ಈ ಕಾರಣಕ್ಕಾಗಿದೆ ಪ್ರವಾದಿಗಳ ವಾರಸುದಾರರಾಗಿರುವ ಉಲಮಾಗಳು ತೌಹೀದ್‌ಗೆ ಪ್ರಥಮ ಆದ್ಯತೆ ನೀಡಿರುವುದು. ಇದರ ಪ್ರಾಮುಖ್ಯತೆಯನ್ನು ಮನಗಂಡಾಗಿತ್ತು ಈ (ಅಕೀದಃ ಮತ್ತು ತೌಹೀದ್‌ನ) ವಿಷಯದಲ್ಲಿ ಅವರು ಅನೇಕ ಗ್ರಂಥಗಳನ್ನು ರಚಿಸಿರುವುದು. ಶೈಖುಲ್ ಇಸ್ಲಾಮ್

9. ಕುರ್‌ಆನ್ 2 : 133

ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ ٱللَّهُ) ರವರು ರಚಿಸಿದ, ನಾವೀಗ ಕಲಿಯುತ್ತಿರುವ ಗ್ರಂಥವಾದ **'ಕಿತಾಬ್ ಅತ್ತೌಹೀದ್'** ಆ ನಿಟ್ಟಿನಲ್ಲಿ ರಚಿಸಲ್ಪಟ್ಟ ಗಂಥಗಳ ಪೈಕಿ ಒಂದಾಗಿದೆ.

ಇದು ಶೈಖುಲ್ ಇಸ್ಲಾಮ್‌ರವರು ಇರಾಕಿನ ಬಸ್ರಾದಲ್ಲಿದ್ದಾಗ ಅಲ್ಲಿನ ಜನರ ಶಿರ್ಕ್ ಮತ್ತು ಕುಫ್ರ್‌ನ ಪರಿಸ್ಥಿತಿಯನ್ನು ನೋಡಿ ಬರೆಯಲಾರಂಭಿಸಿದ ಮತ್ತು ತಮ್ಮ ಊರಾಗಿರುವ ನಜ್ದ್‌ಗೆ ಹಿಂತಿರುಗಿ ಬಂದಾಗ ಬರೆದು ಸಂಪೂರ್ಣಗೊಳಿಸಿದ ಗ್ರಂಥವಾಗಿದೆ. ಈ ಗ್ರಂಥಕ್ಕೆ ಅನೇಕ ಉಲಮಾಗಳು ವಿವರಣೆಗಳನ್ನು (ಶುರೂಹ್‌ಗಳನ್ನು) ಬರೆದಿರುವರು. ಈ ಗ್ರಂಥಕ್ಕೆ ಪ್ರಪ್ರಥಮವಾಗಿ ವಿವರಣೆ ಬರೆದವರು ಅವರ ಮೊಮ್ಮಗನಾದ ಶೈಖ್ ಸುಲೈಮಾನ್ ಬಿನ್ ಅಬ್ದಿಲ್ಲಾಹ್ (رَحِمَهُ ٱللَّهُ) ರವರಾಗಿದ್ದಾರೆ. ಆದರೆ ಅದರ ವಿವರಣೆಯನ್ನು ಅವರು ಸಂಪೂರ್ಣಗೊಳಿಸುವ ಮೊದಲೇ ಅವರು ತೀರಿಕೊಂಡರು, ನಂತರ ಅವರ ಇನ್ನೋರ್ವ ಮೊಮ್ಮಗನಾದ ಶೈಖ್ ಅಬ್ದುರ್ರಹ್ಮಾನ್ ಬಿನ್ ಹಸನ್ (رَحِمَهُ ٱللَّهُ) ರವರು ಇದರ ವಿವರಣೆಯನ್ನು **"ಫತ್‌ಹುಲ್ ಮಜೀದ್ ಲಿ ಶರ್ಹಿ ಕಿತಾಬಿತ್ತೌಹೀದ್"** ಎಂಬ ಶೀರ್ಷಿಕೆಯಡಿ ಸಂಪೂರ್ಣಗೊಳಿಸಿರುವರು. ಅದೇರೀತಿ ಶೈಖ್ ಹಮದ್ ಬಿನ್ ಅತೀಕ್ (رَحِمَهُ ٱللَّهُ), ಶೈಖ್ ಅಬ್ದುರ್ರಹ್ಮಾನ್ ಬಿನ್ ಕಾಸಿಮ್ (رَحِمَهُ ٱللَّهُ), ಶೈಖ್ ಸುಲೈಮಾನ್ ಬಿನ್ ಹಮ್‌ದಾನ್ (رَحِمَهُ ٱللَّهُ) ಮುಂತಾದ ಅನೇಕ ಉಲಮಾಗಳು ಈ ಗ್ರಂಥಕ್ಕೆ ವಿವರಣೆಗಳನ್ನು ಬರೆದಿರುವರು.

ಶೈಖುಲ್ ಇಸ್ಲಾಮ್‌ರವರು ಈ ಗ್ರಂಥವನ್ನು ತಮ್ಮ ಸ್ವಂತ ಅಭಿಪ್ರಾಯ ಅಥವಾ ಚಿಂತನೆಗಳ ಆಧಾರವಾಗಿಟ್ಟುಕೊಂಡು ಬರೆದಿಲ್ಲ, ಬದಲಾಗಿ ಅಲ್ಲಾಹುವಿನ ವಚನಗಳು ಹಾಗೂ ಪ್ರವಾದಿ (صَلَّى ٱللَّهُ عَلَيْهِ وَسَلَّمَ) ರವರ ಸಂದೇಶ ಪುರಾವೆಗಳ ತಳಹದಿಯಲ್ಲಿ, ಸಲಫುಸ್ಸಾಲಿಹೀನ್‌ಗಳು (ಸಜ್ಜನ ಪೂರ್ವಿಕರು) ಈ ಪುರಾವೆಗಳನ್ನು ಅರ್ಥೈಸಿಕೊಂಡು ಹೇಗೆ ಅದನ್ನವರು ವಿವರಿಸಿಕೊಂಡಿರುವರೋ ಅವುಗಳನ್ನೇ

ಆಧಾರವಾಗಿಟ್ಟುಕೊಂಡು ಅವರು ಈ ಗ್ರಂಥವನ್ನು ರಚಿಸಿರುವರು. ನಾವು ನಮ್ಮ ದೀನ್‌ಅನ್ನು ನಾವು ಅರಿಯಬೇಕಾಗಿರುವುದು ಇದೇ ರೀತಿಯಲ್ಲಾಗಿದೆ.

ಪಥಭ್ರಷ್ಟರು ಆರೋಪಿಸುವಂತೆ ಶೈಖುಲ್ ಇಸ್ಲಾಮ್‌ರವರು ಯಾವುದೇ ಹೊಸತಾದ ಧರ್ಮವನ್ನು ತಂದಿಲ್ಲ, ಅವರ ಈ ಆರೋಪವು ಸುಳ್ಳಾಗಿದೆ. ಬದಲಾಗಿ ಅವರು ಪ್ರವಾದಿ ಮತ್ತು ಸಹಾಬಿಗಳು ಯಾವ ಧರ್ಮದಲ್ಲಿ ಮುನ್ನಡೆದಿದ್ದರೋ ಅದೇ ನೈಜ ಇಸ್ಲಾಮಿನೆಡೆಗೆ ಮರಳಲು ಕರೆನೀಡಿದವರಾಗಿದ್ದರು. ಅವರ ಜೀವನವು ಕುರ್‌ಆನ್ ಮತ್ತು ಸುನ್ನತ್‌ನ ಪುರಾವೆಗಳ ಮೇಲೆ ಆಧಾರಿತವಾಗಿತ್ತು ಎಂಬುದನ್ನು ಅವರ ಗ್ರಂಥಗಳನ್ನು ಓದಿದರೆ ಓರ್ವ ಸಾಮಾನ್ಯ ವ್ಯಕ್ತಿಗೂ ಮನವರಿಕೆಯಾಗುವುದು.

ತೌಹೀದ್‌ಅನ್ನು ಅರಿತುಕೊಂಡು, ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು, ಕಲಿಯಲೂ, ಜನರಿಗೆ ಈ ವಿಷಯದ ಕುರಿತು ಕಲಿಸಿಕೊಡಲು ನಮಗೂ ನಮ್ಮ ಕುಟುಂಬಕ್ಕೂ ಅಲ್ಲಾಹು (سُبْحَانَهُ وَتَعَالَىٰ) ತೌಫೀಕ್ ನೀಡಲಿ.

ಅತ್ಯುತ್ತಮವಾಗಿ ಅರಿತವನು ಅಲ್ಲಾಹುವಾಗಿರುವನು. ಅಲ್ಲಾಹುವಿನ ಸಲಾತ್ ಮತ್ತು ಸಲಾಮ್‌ಗಳು ನಮ್ಮ ಪ್ರವಾದಿಯವರ ಮೇಲೆ, ಅವರ ಕುಟುಂಬದವರ ಮೇಲೆ ಹಾಗೂ ಅವರ ಸಹಚರರ ಮೇಲೆ ಸದಾ ಇರಲಿ.